1069 (1613)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲ ಹಾಗೂ ಬೆಳೆ ಹಾನಿಯಿಂದ ತೊಂದರೆಗೀಡಾದವರಿಗೆ ಪರಿಹಾರ ನೀಡಲು ಕೇಂದ್ರದಿಂದ ವಿಶೇಷ ಅನುದಾನಕ್ಕೆ ಸರ್ಕಾರವು ಮನವಿ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಕೇಂದ್ರದಿಂದ ಬಂದ ಹಣವೆಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು. ಬರ ಪರಿಹಾರ ಕಾರ್ಯಗಳಿಗಾಗಿ ಹೆಚ್ಚುವರಿ ರೂ. 494.00 ಕೋಟಿಗಳ ನೆರವು ಕೋರಿ ಭಾರತ ಸರ್ಕಾರಕ್ಕೆ ಅಕ್ಟೋಬರ್ 1997ರಲ್ಲಿ ಮನವಿಪತ್ರ ಸಲ್ಲಿಸಲಾಗಿತ್ತು. ಪುನಃ ಬರಗಾಲ ಹಾಗೂ ಬೆಳೆ ಹಾನಿ ಪರಿಹಾರ ಕಾರ್ಯಗಳಿಗಾಗಿ ಏಪ್ರಿಲ್ 1998ರಲ್ಲಿ ರೂ. 400.00 ಕೋಟಿಗಳ ನೆರವು ನೀಡುವಂತೆ ಭಾರತ ಸರ್ಕಾರವನ್ನು ಕೋರಲಾಗಿದೆ.

ಆ) ಅಕ್ಟೋಬರ್, 1997ರಲ್ಲಿ ಸಲ್ಲಿಸಿದ್ದ ಮನವಿ ಪತ್ರದ ಸಂಬಂಧ ಭಾರತ ಸರ್ಕಾರವು 'ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿ'ಯಿಂದ ರೂ. 22.00 ಕೋಟಿಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿದೆ. ಏಪ್ರಿಲ್ 1988ರಲ್ಲಿ ಮಾಡಿರುವ ಮನವಿಯು ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ದಾವಣಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಹಾಸ್ಟೆಲ್‌ಗಳು.

1070 (1555)

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು?

ಆ) ಪ್ರತಿ ಹಾಸ್ಟೆಲ್‌ಗೆ ಮತ್ತು ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ಎಷ್ಟು ಖರ್ಚು ಮಾಡಲಾಗುತ್ತದೆ?

ಇ) ಹಾಸ್ಟೆಲ್‌ಗಳಿಗೆ ಇನ್ನೂ ಹೆಚ್ಚಿಗೆ ಹಣ ಬಿಡುಗಡೆ ಮಾಡಲು ಸರ್ಕಾರ ಯೋಚಿಸಿದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ದಾವಣಗೆರೆ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪ.ಜಾತಿ ಮತ್ತು ಪ.ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೆಳಕಂಡಂತೆ ಒಟ್ಟು 28 ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.

1.	ಸರ್ಕಾರಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು	- 7
2.	ಅನುದಾನಿತ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು	- 13
3.	ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳು	- 2
4.	ಖಾಸಗಿ ಕಾಲೇಜು ವಿದ್ಯಾರ್ಥಿನಿಲಯಗಳು	- 6
		28

ಆ) ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ 350 ರೂ. ಹಾಗೂ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ 400 ರೂ.ಗಳನ್ನು ಭೋಜನಾ ವೆಚ್ಚಕ್ಕಾಗಿ ಖರ್ಚು ಮಾಡಲು ಅವಕಾಶವಿದೆ. ಅಲ್ಲದೆ ಸರ್ಕಾರಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ನಿಲಯಾರ್ಥಿಗೆ ಈ ಕೆಳಕಂಡ ವೆಚ್ಚವನ್ನು ನೀಡಲಾಗುತ್ತಿದೆ.

1. ಇತರೆ ವೆಚ್ಚ ರೂ. 25-00 ಮಾಸಿಕ
2. ಪಠ್ಯಪುಸ್ತಕ ಸ್ಟೇಷನರಿ ರೂ. 100-00 ವಾರ್ಷಿಕ
3. ಸಮವಸ್ತ್ರ (2 ಜೊತೆ ಪಾಲಿಯೆಸ್ಟರ್) ರೂ. 300-00 ವಾರ್ಷಿಕವಾಗಿ
4. ಹಾಸಿಗೆ ಹೊದಿಕೆ ರೂ. 300-00 ಮೂರು ವರ್ಷಕ್ಕೆ ಒಂದು ಸಾರಿ.
5. ಕ್ಷೌರದ ವೆಚ್ಚ (ಬಾಲಕರಿಗೆ) 30-00 ವರ್ಷಕ್ಕೆ

ಪ್ರತಿ ವಿದ್ಯಾರ್ಥಿನಿಲಯಕ್ಕೆ ಸಿಬ್ಬಂದಿ ವೇತನ, ವಿದ್ಯುತ್ ನೀರಿನ ವೆಚ್ಚಗಳು ಹಾಗೂ ಬಾಡಿಗೆಗಾಗಿ ನಿರ್ವಹಣಾ ವೆಚ್ಚಗಳನ್ನು ಇಲಾಖೆಯಿಂದ ನೀಡಲಾಗುತ್ತಿದೆ.

ಇ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.